**ಕರ್ನಾಟಕ ಸರ್ಕಾರ**

**ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ**

**ವಿಕಲಚೇತನರ ಸ್ವಾವಲಂಬಿ ಬದುಕಿಗೆ, ಉಜ್ವಲ ಭವಿಷ್ಯಕ್ಕೆ ಜಾರಿಯಲ್ಲಿರುವ ವಿವಿಧ ಯೋಜನೆಗಳು**

ಹಲವಾರು ಕಾರಣಗಳಿಂದ ಒಂದಲ್ಲ ಒಂದು ನ್ಯೂನತೆಯಿಂದ ಬಳಲುತ್ತಿರುವ ವಿಕಲಚೇತನರು ಸಹಾ ಸಮಾಜದ ಅವಿಭಾಜ್ಯ ಅಂಗ, ಅವರೂ ಕೂಡಾ ಸೃಷ್ಟಿಯ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುವಂತಾಗಬೇಕು. ಸ್ವಾವಲಂಬಿಗಳಾಗಿ ಬದುಕಬೇಕು, ಸುಂದರ, ಸದೃಢ ಸಮಾಜದ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕು. ಈ ದಿಸೆಯಲ್ಲಿ ಇಂತಹವರ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಅಭ್ಯುದಯಕ್ಕೆ ಶಿಕ್ಷಣ, ಉದ್ಯೋಗ, ಸಾಮಾಜಿಕ ಭದ್ರತೆ ಮತ್ತು ಪುನರ್ವಸತಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು 1988 ರಲ್ಲಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸ್ಥಾಪನೆಗೊಂಡು, ಹಲವಾರು ಯೋಜನೆ/ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಕಚೇರಿಯಲ್ಲಿ ವಿಕಲಚೇತನರ ಕಲ್ಯಾಣ ವಿಭಾಗವಿದ್ದು, ಇಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

**ಎ. ಶೈಕ್ಷಣಿಕ: 1. ವಿಶೇಷ ಶಾಲೆಗಳು:**

ಎ) ಶ್ರವಣದೋಷವುಳ್ಳ ಮಕ್ಕಳಿಗಾಗಿ, ಮೈಸೂರು, ಗುಲ್ಬರ್ಗಾ, ಬಳ್ಳಾರಿ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಸರ್ಕಾರದ ವತಿಯಿಂದ ವಸತಿಯುತ ಶಾಲೆಗಳನ್ನು ನಡೆಸಲಾಗುತ್ತಿದೆ. ಇತರೆ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಇಂತಹ ವಸತಿಯುತ ಶಾಲೆಗಳನ್ನು ನಡೆಸಲು ಅನುಮತಿ ನೀಡಿ ಕೇಂದ್ರ ಮತ್ತು ರಾಜ್ಯ ಅನುದಾನವನ್ನು ಒದಗಿಸುವ ವ್ಯವಸ್ಥೆಯೂ ಇರುತ್ತದೆ. ರಾಜ್ಯ ಸರ್ಕಾರದ ಶಿಶು ಕೇಂದ್ರೀಕೃತ ಶೈಕ್ಷಣಿಕ ಯೋಜನೆಯಡಿ ಹಾಸನ ನಗರದಲ್ಲಿ ಜೀವನಜ್ಯೋತಿ ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆ ಹಾಗೂ ಸಕಲೇಶಪುರ ತಾಲ್ಲೂಕಿನ ಕೌಡಳ್ಳಿಯಲ್ಲಿ ಎನ್.ಕೆ. ಗಣಪಯ್ಯ ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ.

ಬಿ) ದೃಷ್ಟಿದೋಷವುಳ್ಳ ಮಕ್ಕಳಿಗಾಗಿ ಮೈಸೂರು, ಗುಲ್ಬರ್ಗಾ, ದಾವಣಗೆರೆ ಮತ್ತು ಹುಬ್ಬಳ್ಳಿ ಜಿಲ್ಲೆಗಳಲ್ಲಿ ವಸತಿಯುತ ವಿಶೇಷ ಶಾಲೆಗಳನ್ನು ಸರ್ಕಾರದ ವತಿಯಿಂದ ನಡೆಸುತ್ತಿದ್ದು, ಈ ಶಾಲೆಗಳಲ್ಲಿ ವಿಶೇಷ ತರಬೇತಿ ಹೊಂದಿದ ಶಿಕ್ಷಕರಿದ್ದು, ಇಂತಹ ಮಕ್ಕಳಿಗೆ ಉಚಿತ ಊಟ, ವಸತಿ ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಅಲ್ಲದೆ, ರಾಜ್ಯ ಅನುದಾನದಡಿ ಹಾಸನ ನಗರದಲ್ಲಿ ಎಂ.ಕೃಷ್ಣ ಅಂಧ ಮಕ್ಕಳ ವಸತಿಯುತ ಶಾಲೆ ಹಾಗೂ ರಾಜ್ಯ ಸರ್ಕಾರದ ಶಿಶು ಕೇಂದ್ರೀಕೃತ ಶೈಕ್ಷಣಿಕ ಯೋಜನೆಯಡಿ ದಾರಿದೀಪ ಅಂಧ ಮಕ್ಕಳ ವಸತಿಯುತ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ.

2. **ಶಿಷ್ಯವೇತನ ಹಾಗೂ ಪ್ರೋತ್ಸಾಹಧನ**: ಶೇ. 40 ಕ್ಕಿಂತ ಹೆಚ್ಚಿನ ಅಂಗವಿಕಲತೆಯುಳ್ಳ 1ನೇ ತರಗತಿಯಿಂದ ಉನ್ನತ ವ್ಯಾಸಂಗ ಮಾಡುವ ವಿಕಲಚೇತನ ವಿದ್ಯಾರ್ಥಿ/ನಿಯರುಗಳಿಗೆ ವಾರ್ಷಿಕ ವಿದ್ಯಾರ್ಥಿ ವೇತನವನ್ನು ತರಗತಿಗನುಗುಣವಾಗಿ ಮಂಜೂರು ಮಾಡಲಾಗುತ್ತಿದೆ. ಎಸ್.ಎಸ್.ಎಲ್.ಸಿ. ಮತ್ತು ಮೇಲ್ಪಟ್ಟ ಪಬ್ಲಿಕ್ ಪರೀಕ್ಷೆಗಳಲ್ಲಿ ಶೇ. 60ಕ್ಕಿಂತ ಹೆಚ್ಚಿನ ಅಂಕ

ಗಳಿಸಿದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿ/ನಿಯರುಗಳಿಗೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

3. **ಬ್ರೈಲ್ ಮುದ್ರಣಾಲಯ;** ಅಂಧ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಬ್ರೈಲ್ ಪುಸ್ತಕಗಳನ್ನು ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಮುದ್ರಿಸಿ ರಾಜ್ಯ ಎಲ್ಲಾ ಶಾಲೆಗಳಿಗೆ ಉಚಿತವಾಗಿ ಸರಬರಾಜು ಮಾಡಲಾಗುವುದು.

4. **ವಿಶೇಷ ಶಿಕ್ಷಕರ ತರಬೇತಿ ಕೇಂದ್ರ**: ಪ್ರಾಥಮಿಕ ಹಂತದ ಅಂಧ ಮಕ್ಕಳಿಗೆ ಮತ್ತು ಶ್ರವಣ ದೋಷವುಳ್ಳ ಮಕ್ಕಳಿಗೆ ಭೋದನೆ ಮಾಡುವ ಶಿಕ್ಷಕರಿಗೆ ಡಿಪ್ಲೋಮಾ ತರಬೇತಿ ನೀಡುವ ಸಲುವಾಗಿ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ಪ್ರಾರಂಭಿಸಲಾಗಿರುತ್ತದೆ.

6. **ಅಂಗವಿಕಲ ಉದ್ಯೋಗಸ್ಥ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯ:**
ವಿಕಲಚೇತನ ವಿದ್ಯಾರ್ಥಿನಿಯರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ವಿದ್ಯಾವಂತರಾಗುವಂತೆ ಪ್ರೋತ್ಸಾಹಿಸಿ ಅನುಕೂಲ ಕಲ್ಪಿಸಿಕೊಡಲು ಉಚಿತ, ಊಟ, ವಸತಿ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಜಿಲ್ಲೆಗೊಂದರಂತೆ ವಸತಿ ನಿಲಯಗಳನ್ನು ಸ್ಥಾಪಿಸಲಾಗಿದೆ. ಉದ್ಯೋಗಸ್ಥ ಮಹಿಳೆಯರು ಮಾಸಿಕ 800=00 ರೂ. ಗಳನ್ನು ಮಾತ್ರ ಪಾವತಿಸಿ ಈ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ.

## ಬಿ. ಉದ್ಯೋಗ ಮತ್ತು ತರಬೇತಿ;

1. **ಸರ್ಕಾರಿ ಹುದ್ಧೆಗಳಲ್ಲಿ ಮೀಸಲಾತಿ:** ಎ ಮತ್ತು ಬಿ ಶ್ರೇಣಿಯ ಹುದ್ದೆಗಳಲ್ಲಿ ರಾಜ್ಯ ಸರ್ಕಾರವು ಶೇ.3 ರಷ್ಟು ಹುದ್ಧೆಗಳನ್ನು ಹಾಗೂ ಸಿ ಮತ್ತು ಡಿ ಶ್ರೇಣಿಯ ಹುದ್ಧೆಗಳಲ್ಲಿ ಶೇ. 5 ಹುದ್ಧೆಗಳನ್ನು ವಿಕಲಚೇತನರಿಗಾಗಿ ಮೀಸಲಾತಿ ಸೌಲಭ್ಯ ಒದಗಿಸಲಾಗಿದೆ.

2. **ಸ್ವಯಂ ಉದ್ಯೋಗ;** ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಸಣ್ಣ ವ್ಯಾಪಾರ ಮಾಡಿ
ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗುವಂತೆ "ಆಧಾರ" ಎಂಬ ಯೋಜನೆ ಜಾರಿಯಲ್ಲಿದ್ದು, ಫಲಾನುಭವಿಗಳಿಗೆ ಒಂದು ಕಬ್ಬಿಣದ ಪೆಟ್ಟಿಗೆ ಅಂಗಡಿಯನ್ನು ಉಚಿತವಾಗಿ ಹಾಗೂ ರೂ.20000/- ವನ್ನು ಬಡ್ಡಿರಹಿತ ಸಾಲವನ್ನಾಗಿ ನೀಡಲಾಗುವುದು.

3. **ಕರ್ನಾಟಕ ರಾಜ್ಯ ಅಂಗವಿಕಲ ಅಭಿವೃದ್ಧಿ ನಿಗಮ;** ವಿಕಲಚೇತನರು ಸ್ವಯಂ ಉದ್ಯೋಗ ಮತ್ತು ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲು ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮದಿಂದ, ಮಹಿಳಾ ಅಭಿವೃದ್ಧಿ ನಿಗಮವನ್ನು ಚಾನಲೈಸಿಂಗ್ ಏಜೆನ್ಸಿಯಾಗಿ ನೇಮಕ ಮಾಡಿದ್ದು, ಇದರ ಮುಖಾಂತರ ಕಡಿಮೆ ಬಡ್ಡಿ ದರದಲ್ಲಿ (ಶೇ.5) ಸಾಲಸೌಲಭ್ಯ ಕಲ್ಪಿಸುವುದು.

4. **ಸ್ಫೂರ್ತಿ ಯೋಜನೆ:** ವಿಕಲಚೇತನರ ಸ್ವಸಹಾಯ ಗುಂಪುಗಳಿಗೆ ಆದಾಯೋತ್ಪನ್ನ ಚಟುವಟಿಕೆ ಗಳನ್ನು ಹಮ್ಮಿಕೊಳ್ಳಲು ಸಹಾಯಧನ ಹಾಗೂ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದು.

## ಸಿ. ಪುನರ್ವಸತಿ ಯೋಜನೆಗಳು;

1. **<u>ಸಾಧನ ಸಲಕರಣೆಗಳ ಪೂರೈಕೆ;</u>** ವಿಕಲಾಂಗ ವ್ಯಕ್ತಿಗಳಿಗೆ ಅಗತ್ಯವಾದ ತ್ರಿಚಕ್ರವಾಹನ, ಶ್ರವಣ ಸಾಧನ, ಗಾಲಿ ಕುರ್ಚಿ, ಕೃತಕ ಅಂಗಾಂಗಗಳು ಅಂಧರಿಗೆ ಬಿಳಿಕೋಲುಗಳು, ಕಪ್ಪು ಕನ್ನಡಕಗಳು, ಬ್ರೈಲ್ ವಾಚ್‌ಗಳು ಇತ್ಯಾದಿಗಳನ್ನು ವೈದ್ಯಕೀಯ ಸಲಹೆಯಂತೆ ಉಚಿತವಾಗಿ ನೀಡುವುದು.

2. **<u>ಸಮುದಾಯ ಆಧಾರಿತ ಪುನರ್ವಸತಿ ಯೋಜನೆ;</u>** ವಿಕಲಚೇತನರಿಗೆ ಅವರ ವಾಸ ಸ್ಥಳದಲ್ಲಿಯೇ ಸಾಮಾಜಿಕ, ಆರ್ಥಿಕ ಪುನರ್ವಸತಿ ಸೇವೆಗಳನ್ನು ಒದಗಿಸಲು ಅವಕಾಶ ಕಲ್ಪಿಸಿ ಕೊಡುವುದು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಯೋಜನೆಯನ್ನು ಜಾರಿಗೊಳಿಸಲಾಗುವುದು.

3. **<u>ವೈದ್ಯಕೀಯ ಪರಿಹಾರ ನಿಧಿ ಯೋಜನೆ;</u>** ಅಂಗವಿಕಲತೆಯನ್ನು ಶಸ್ತ್ರ ಚಿಕಿತ್ಸೆ ಮೂಲಕ ಸರಿಪಡಿಸಲು ಜಿಲ್ಲಾ ಮಟ್ಟದ ಸುಸಜ್ಜಿತ ಖಾಸಗಿ ಆಸ್ಪತ್ರೆ, ಸರ್ಕಾರಿ ಆಸ್ಪತ್ರೆ ಹಾಗೂ ಸಂಜಯಗಾಂಧಿ ಆಸ್ಪತ್ರೆ, ಬೆಂಗಳೂರು ಇಲ್ಲಿ ಚಿಕಿತ್ಸೆ ಪಡೆದವರಿಗೆ ಖರ್ಚು ಮಾಡಿದ ಹಣದ ಮೊತ್ತ ಅಥವಾ ಗರಿಷ್ಟ ರೂ.35000/- ಗಳವರೆಗೆ ಧನಸಹಾಯದ ಸೌಲಭ್ಯ ನೀಡಲಾಗುವುದು.

4. **<u>ನಿರಾಯಾಮ ಆರೋಗ್ಯ ವಿಮೆ ಯೋಜನೆ;</u>** ಬುದ್ಧಿಮಾಂದ್ಯರು, ಮಾನಸಿಕ ಅಸ್ವಸ್ಥರು ಮತ್ತು ಬಹುವಿಧ ವಿಕಲಚೇತನರಿಗೆ ವೈದ್ಯಕೀಯ ವೆಚ್ಚವನ್ನು ಭರಿಸಲು ಅನುಕೂಲವಾಗುವಂತೆ ನಿರಾಯಾಮ ಆರೋಗ್ಯ ವಿಮೆಯು ಜಾರಿಯಲ್ಲಿರುತ್ತದೆ.

5. **<u>ಜಿಲ್ಲಾ ಪುನರ್ವಸತಿ ಕೇಂದ್ರ;</u>** ವಿವಿಧ ಅಂಗವಿಕಲತೆಯುಳ್ಳ ವ್ಯಕ್ತಿಗಳನ್ನು ಪತ್ತೆ ಹಚ್ಚಿ, ಸಾಧನ ಸಲಕರಣೆಗಳು, ಕೃತಕ ಅಂಗಾಂಗಳು, ಗುರುತಿನ ಚೀಟಿ, ಮಾಸಾಶನ, ಸ್ವಯಂ ಉದ್ಯೋಗ ಯೋಜನೆಯಡಿ ಸಹಾಯ ಮಾಡಲು ಅನುಕೂಲವಾಗುವಂತೆ ರಾಜ್ಯ ಸರ್ಕಾರದ ನೆರವಿನಿಂದ ಜಿಲ್ಲೆಗಳಲ್ಲಿ ಪುನರ್ವಸತಿ ಕೇಂದ್ರಗಳನ್ನು ಪ್ರಾರಂಭಿಸಲಾಗುತ್ತಿದೆ.

## <u>ಡಿ. ಸಾಮಾಜಿಕ ಭದ್ರತಾ ಯೋಜನೆಗಳು;</u>

**<u>1. ಗುರುತಿನ ಚೀಟಿ;</u>** ವಿಕಲಚೇತನರು ಸರ್ಕಾರದಿಂದ ದೊರೆಯುವ ವಿವಿಧ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುವಂತೆ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ರಚಿತವಾಗಿರುವ ವೈದ್ಯಕೀಯ ಮಂಡಳಿಯಿಂದ ಅರ್ಹ ವಿಕಲಚೇತನರಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ. ಶೇ. 40ಕ್ಕಿಂತ ಹೆಚ್ಚಿನ ವಿಕಲಚೇತನರಿಗೆ ಮಾತ್ರ ಇಂತಹ ಗುರುತಿನ ಚೀಟಿಗಳನ್ನು ನೀಡಲಾಗುವುದು.

**<u>2. ಪೋಷಣಾ ಭತ್ಯೆ;</u>** ವಾರ್ಷಿಕ ರೂ. 6000/- ಕ್ಕಿಂತ ಕಡಿಮೆ ಆದಾಯದ ಕುಟುಂಬದಲ್ಲಿ ಶೇ. 40 ರಿಂದ 74% ಅಂಗವಿಕಲತೆ ಇರುವವರಿಗೆ ಮಾಹೆಯಾನ ರೂ.400/- ಶೇ. 75 ರಿಂದ 100 ಅಂಗವಿಕಲತೆ ಇರುವವರಿಗೆ ಮಾಹೆಯಾನ ರೂ.1000/- ಗಳ ಪೋಷಣಾ ಭತ್ಯೆಯನ್ನು ಆಯಾ ತಾಲ್ಲೂಕಿನ ತಹಸೀಲ್ದಾರರವರು ಮಂಜೂರು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

**3.ಶಿಶುಪಾಲನಾ ಭತ್ಯೆ:** 2013–14ನೇ ಸಾಲಿನಿಂದ ವಾರ್ಷಿಕ ಆದಾಯ ರೂ.2.50 ಲಕ್ಷಗಳ ಮಿತಿಯೊಳಗಿನ ಬಡಕುಟುಂಬಗಳ ದೃಷ್ಟಿಹೀನ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ, 2 ಹೆರಿಗೆಯವರೆಗೆ ಪ್ರತಿ ಹೆರಿಗೆ ನಂತರ 2 ವರ್ಷಗಳ ಅವಧಿಗೆ ಆರೋಗ್ಯ ಹಾಗೂ ಪೌಷ್ಠಿಕ ಆಹಾರ ದೃಷ್ಟಿಯಿಂದ ತಿಂಗಳಿಗೆ ರೂ.2000/–ಗಳ ಶಿಶುಪಾಲನಾ ಭತ್ಯೆ ನೀಡುವ ಯೋಜನೆ.

4.**ವಿಕಲಚೇತನ ವ್ಯಕ್ತಿಗಳನ್ನು ವಿವಾಹವಾಗುವ ಸಾಮಾನ್ಯ ವ್ಯಕ್ತಿಗಳಿಗೆ ಪ್ರೋತ್ಸಾಹಧನ:** 2013–14ನೇ ಸಾಲಿನಿಂದ ವಿಕಲಚೇತನ ಯುವಕ/ಯುವರಿಯವರನ್ನು ವಿವಾಹವಾಗುವ ಸಾಮಾನ್ಯ ಯುವಕ/ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನರ ಹೆಸರಿನಲ್ಲಿ ರೂ.50000/–ಗಳನ್ನು ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡುವ ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಭತ್ಯೆಯಾಗಿ ವಿಕಲಚೇತನರನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಪಡೆಯುವ ಯೋಜನೆ.

5.**ವಿಕಲಚೇತನರಿಗೆ ಉನ್ನತ ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣ ಶುಲ್ಕವನ್ನು ಮರುಪಾವತಿಸುವ ಯೋಜನೆ:** ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ 2013–14ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ ಮತ್ತು ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗಧಿಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆ.

**6. ವಿಮಾ ಯೋಜನೆ;** ಬುದ್ಧಿಮಾಂದ್ಯ ಮಕ್ಕಳ ತಂದೆ;ತಾಯಿ;ಪೋಷಕರುಗಳಿಗೆ ಆದಾಯ ವಾರ್ಷಿಕ ರೂ.12000 ಕ್ಕಿಂತ ಕಡಿಮೆ ಇದ್ದಲ್ಲಿ ವಿಮಾ ಸೌಲಭ್ಯ ಒದಗಿಸಲಾಗುತ್ತದೆ. ಬುದ್ದಿಮಾಂದ್ಯ ವ್ಯಕ್ತಿಗಳ ತಂದೆ;ತಾಯಿ;ಪೋಷಕರ ನಿಧನದ ನಂತರ ಜೀವ ವಿಮಾ ನಿಗಮದಿಂದ (ನಾಮ ನಿರ್ದೇಶಿತ ವ್ಯಕ್ತಿಗಳಿಗೆ ಬುದ್ಧಿಮಾಂದ್ಯ ವ್ಯಕ್ತಿಗಳ ಪೋಷಣೆಗಾಗಿ) ರೂ.20000/– ವಿಮಾ ಮೊತ್ತ ದೊರೆಯುತ್ತದೆ.

**7.ತರಬೇತಿ ಮತ್ತು ಉದ್ಯೋಗ;** ಎಸ್.ಎಸ್.ಎಲ್.ಸಿ. ಮತ್ತು ಹೆಚ್ಚಿನ ವಿದ್ಯಾರ್ಹತೆ ಹೊಂದಿದವರಿಗೆ ಗಣಕ ಯಂತ್ರ ಆಧಾರಿತ 3 ಹಾಗೂ 6 ತಿಂಗಳ ತರಬೇತಿಗಳಾದ ಕಾಲ್ ಸೆಂಟರ್, ಪಿ.ಸಿ. ಹಾರ್ಡವೇರ್, ಡಾಟಾ ಎಂಟ್ರಿ, ಡಿ.ಟಿ.ಪಿ. ಡಿಸಿಎಸಿ ಹಾಗೂ 7ನೇ ತರಗತಿ ಉತ್ತೀರ್ಣರಾದವರಿಗೆ 3 ತಿಂಗಳ ವೃತ್ತಿ ತರಬೇತಿ ನೀಡುವ ಯೋಜನೆಯಿದ್ದು, ಸಮರ್ಪಕವಾಗಿ ತರಬೇತಿ ಪೂರೈಸಿದವರಿಗೆ ಉದ್ಯೋಗಾವಕಾಶಗಳಿರುತ್ತದೆ. ಅವಿದ್ಯಾವಂತರಾದ ವಿಕಲಚೇತನರಿಗೂ ಬೆಂಗಳೂರಿನಲ್ಲಿರುವ ಎ.ಪಿ.ಡಿ. ಸಂಸ್ಥೆ ವತಿಯಿಂದ ಉಚಿತವಾಗಿ ತೋಟಗಾರಿಕೆ ತರಬೇತಿ ಪಡೆಯುವ ಸೌಲಭ್ಯವಿದ್ದು, ಉದ್ಯೋಗದ ಅವಕಾಶಗಳನ್ನು ಕಲ್ಪಿಸಲಗುತ್ತದೆ.

**8.ಮಾನಸ ಕೇಂದ್ರಗಳು:** ಮಾನಸಿಕ ಅಸ್ವಸ್ಥರಿಗೆ ಆಶ್ರಯ ಕಲ್ಪಿಸುವ ಸಲುವಾಗಿ, ಬೆಂಗಳೂರು ಬಳ್ಳಾರಿ, ಬೆಳಗಾವಿ ರಾಯಚೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಇಂತಹ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

**9.ಸಾಧನೆ ಮತ್ತು ಪ್ರತಿಭೆ;** ವಿಕಲಚೇತನರು ಸಾಂಸ್ಕೃತಿಕ ಹಾಗು ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಸರ್ಕಾರಿದಿಂದ ಸಹಾಯಧನ ನೀಡಲಾಗುತ್ತಿದೆ.

**10.ಬಸ್‌ಪಾಸ್ / ರೈಲ್ವೆ ಪಾಸ್ ;** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಸಲು ಅಂಧರಿಗೆ ಉಚಿತವಾಗಿ ಹಾಗೂ ಇತರೆ ವಿಕಲಚೇತನರಿಗೆ ಬಸ್ಸು ಮತ್ತು ರೈಲ್ವೆಯಲ್ಲಿ ರಿಯಾಯಿತಿ ದರದಲ್ಲಿ ಪಾಸ್‌ಗಳನ್ನು ವಿತರಿಸಲಾಗುವುದು.

**11.ಗ್ರಾಮೀಣ ಪುನರ್ವಸತಿ ಯೋಜನೆ;** ವಿಕಲಚೇತನರು ಇರುವ ಸ್ಥಳದಲ್ಲಿಯೇ ವಿವಿಧ ಇಲಾಖೆಯ ಸೌಲಭ್ಯಗಳನ್ನು ತಲುಪಿಸುವ ಯೋಜನೆಯಾಗಿದ್ದು, ಈ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಗೊಬ್ಬರಂತೆ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ಪ್ರತಿ ತಾಲ್ಲೂಕು ಪಂಚಾಯಿತಿಗೊಬ್ಬರಂತೆ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಗೌರವಧನ ಆಧಾರದಲ್ಲಿ ವಿಕಲಚೇತನರನ್ನು ಗುರುತು ಮಾಡಲಾಗುತ್ತಿದ್ದು, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಆಯಾ ಗ್ರಾಮ ಪಂಚಾಯಿತಿ ಕಚೇರಿಯಲ್ಲಿದ್ದು, ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರು ತಾಲ್ಲೂಕು ಪಂಚಾಯಿತಿಯಲ್ಲಿದ್ದು ಕೆಲಸ ನಿರ್ವಹಿಸುತ್ತಿದ್ದಾರೆ.

**12.ಪ್ರಶಸ್ತಿ:** ವಿಕಲಚೇತನರ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಸಂಘ ಸಂಸ್ಥೆಗಳಿಗೆ ಮತ್ತು ವ್ಯಕ್ತಿಗಳಿಗೆ ರಾಜ್ಯ ಪ್ರಶಸ್ತಿಯನ್ನು ನೀಡಿ ಪ್ರತಿ ವರ್ಷ ನಡೆಯುವ ವಿಶ್ವ ಅಂಗವಿಕಲರ ದಿನಾಚರಣೆಯಂದು ಗೌರವಿಸಲಾಗುವುದು. ವಿಕಲಚೇತನ ಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ವಿಶೇಷ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

## 2. ಹಿರಿಯ ನಾಗರಿಕರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳು:

1999–2000 ನೇ ಇಸವಿಯಲ್ಲಿ ಹಿರಿಯ ನಾಗರಿಕರನ್ನು ಅಂಗವಿಕಲರ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಸೇರಿಸಲ್ಪಟ್ಟಿರುತ್ತದೆ. ಹಿರಿಯ ನಾಗರಿಕರ ಸಮಸ್ಯೆಗಳು ಅವರು ಪಡುತ್ತಿರುವ ಬವಣೆಗಳನ್ನು ಅರಿತ ಸರ್ಕಾರ ಇವರಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದು ಹಂತ ಹಂತವಾಗಿ ಅನುಷ್ಠಾನಗೊಳಿಸುತ್ತಿದೆ.

1. **ಗುರುತಿನ ಚೀಟಿ:** ಸ್ವಯಂ ಸೇವಾ ಸಂಸ್ಥೆಗಳ ಮೂಲಕ 60 ವರ್ಷ ಮೇಲ್ಪಟ್ಟ ಎಲ್ಲಾ ಪುರುಷ ಮತ್ತು ಮಹಿಳಾ ಹಿರಿಯ ನಾಗರಿಕರಿಗೆ ರೂ.50/– ಗಳನ್ನು ಮಾತ್ರ ಪಡೆದು ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ.

2. **ವೃದ್ಧಾಪ್ಯ ವೇತನ:** ವೃದ್ಧಾಪ್ಯದಲ್ಲಿ ಮಕ್ಕಳು ಮತ್ತು ಇತರೆ ಕುಟುಂಬದ ಸದಸ್ಯರಿಂದ ನಿರ್ಲಕ್ಷ್ಯಕ್ಕೊಳಗಾದ ಬಡ ಕುಟುಂಬದಲ್ಲಿ 60 ವರ್ಷ ಮೇಲ್ಪಟ್ಟ ವೃದ್ಧರಿಗೆ ಮಾಹೆಯಾನ ರೂ.400/– ಗಳ ಮಾಸಾಶನವನ್ನು ಸಂಬಂಧಪಟ್ಟ ತಾಲ್ಲೂಕು ತಹಸೀಲ್ದಾರ ರವರು ಮಂಜೂರು ಮಾಡುತ್ತಾರೆ.

3. **ಸಂಧ್ಯಾ ಸುರಕ್ಷಾ ಯೋಜನೆ;** ಮಕ್ಕಳು ಮತ್ತು ಕುಟುಂಬದ ಸದಸ್ಯರಿಂದ ತ್ಯಜಿಸಲ್ಪಟ್ಟ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಮಾಹೆಯಾನ 400/- ಮಾಸಾಶನವನ್ನು ಸಂಬಂಧಪಟ್ಟ ತಾಲ್ಲೂಕು ತಹಸೀಲ್ದಾರ ರವರು ಮಂಜೂರು ಮಾಡುತ್ತಾರೆ.

4. **ಹಗಲು ಯೋಗಕ್ಷೇಮ;** ಆಯ್ದ ಹಿಂದುಳಿದ ಜಿಲ್ಲೆಗಳಲ್ಲಿ ವಯೋವೃದ್ಧರು ಶಾಂತ ಚಿತ್ತರಾಗಿ ಕಾಲ ಕಳೆದು ಚಟುವಟಿಕೆಯಿಂದ ಇರಲು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಹಗಲು ಯೋಗಕ್ಷೇಮ ಕೇಂದ್ರಗಳನ್ನು ತೆರೆದು ಉಚಿತ ಉಪಹಾರ ಮನರಂಜನೆ ವೈದ್ಯಕೀಯ ಸೌಲಭ್ಯ ಇನ್ನಿತರೆ ಸವಲತ್ತುಗಳನ್ನು ಒದಗಿಸಲಾಗುತ್ತಿದೆ.

5. **ಸಹಾಯವಾಣಿ;** ವಯೋವೃದ್ಧರು ತಾವು ಇರುವ ಸ್ಥಳದಲ್ಲಿಯೇ ತಮಗಾಗಿರುವ ತೊಂದರೆ, ಶೋಷಣೆ ಇತ್ಯಾದಿಗಳಿಂದ ಹೊರ ಬರಲು ಅನುಕೂಲವಾಗುವಂತೆ ಜಿಲ್ಲಾ ಕೇಂದ್ರದಲ್ಲಿ ಪೋಲೀಸ್ ಕಮೀಷನರ್ ರವರ ಸಹಯೋಗದೊಂದಿಗೆ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಉಚಿತ ದೂರವಾಣಿ ಸಂಖ್ಯೆ 1090ರ ಮೂಲಕ ಈ ಕೇಂದ್ರದಲ್ಲಿ ಹೆಸರು ನೋಂದಾಯಿಸಿ ಸೇವೆಯನ್ನು ಪಡೆಯಬಹುದಾಗಿರುತ್ತದೆ.

6. **ವೃದ್ಧಾಶ್ರಮಗಳು:** ಕುಟುಂಬದ ಸದಸ್ಯರಿಂದ ತಿರಸ್ಕರಿಸಲ್ಪಟ್ಟ ಬಡ / ನಿರ್ಗತಿಕ ವೃದ್ಧರಿಗಾಗಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ಪ್ರಾರಂಭಿಸಿ, ಉಚಿತ ಊಟ ವಸತಿ ಮನರಂಜನೆ ಹಾಗೂ ಆರೋಗ್ಯ ಸೌಲಭ್ಯ ವಾಚನಾಲಯ ಇತ್ಯಾದಿ ಸವಲತ್ತುಗಳನ್ನು ಒದಗಿಸಲಾಗುತ್ತಿದೆ.

7. **ಪ್ರಯಾಣದಲ್ಲಿ ರಿಯಾಯಿತಿ;** 60 ವರ್ಷ ದಾಟಿದ ವಯೋವೃದ್ಧರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳಲ್ಲಿ ಕರ್ನಾಟಕದಾದ್ಯಂತ ಪ್ರಯಾಣಿಸಲು ಶೇ. 25 ರ ರಿಯಾಯಿತಿ ಲಭ್ಯವಿರುತ್ತದೆ. ಭಾರತದಾದ್ಯಂತ ಪ್ರಯಾಣಿಸಲು ರೈಲಿನಲ್ಲಿಯೂ ಸಹ ಶೇ. 25 ರ ರಿಯಾಯಿತಿಯ ಸೌಲಭ್ಯವಿರುತ್ತದೆ.

8. **ಹೆಚ್ಚಿನ ಬಡ್ಡಿ;** 60 ವರ್ಷ ಮೇಲ್ಪಟ್ಟ ವೃದ್ಧರು ಬ್ಯಾಂಕ್ ಠೇವಣಿಗೆ ಪ್ರಸ್ತುತ ಸಾಮಾನ್ಯ ಬಡ್ಡಿ ದರಕ್ಕಿಂತ ಶೇ. 1 ರಷ್ಟು ಹೆಚ್ಚಿನ ಬಡ್ಡಿಯನ್ನು ಕೊಡುವ ಸೌಲಭ್ಯ ಎಲ್ಲಾ ಬ್ಯಾಂಕುಗಳಲ್ಲಿಯೂ ಲಭ್ಯವಿರುತ್ತದೆ.

9. **ಸಂಚಾರಿ ಆರೋಗ್ಯ ಕೇಂದ್ರ:** ಗ್ರಾಮಾಂತರ ಪ್ರದೇಶದಲ್ಲಿನ ವೃದ್ಧರಿಗೆ ಆರೋಗ್ಯ ಸೌಲಭ್ಯಗಳನ್ನು ಸ್ಥಳದಲ್ಲಿಯೇ ಒದಗಿಸಲು ಅನುಕೂಲವಾಗುವಂತೆ ನುರಿತ ವೈದ್ಯರನ್ನೊಳಗೊಂಡ ಸ್ವಯಂ ಸೇವಾ ಸಂಸ್ಥೆ / ಆಸ್ಪತ್ರೆಗಳಿಗೆ ಸಹಾಯಧನವನ್ನು ನೀಡಲಾಗುತ್ತದೆ.

10. **ಹಿರಿಯ ನಾಗರಿಕರಿಗೆ ಪ್ರಶಸ್ತಿ:** ಕಲೆ, ಸಾಹಿತ್ಯ, ಕ್ರೀಢೆ, ಕಾನೂನು ಹಾಗೂ ಇತರೆ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಹಿರಿಯ ನಾಗರಿಕರಿಂದ ಅಗತ್ಯ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸ್ವೀಕರಿಸಿ, ರಾಜ್ಯ ಮಟ್ಟದ ಸಮಿತಿಯಿಂದ ಆಯ್ಕೆಗೊಂಡ ಹಿರಿಯ ನಾಗರಿಕರಿಗೆ ಪ್ರಶಸ್ತಿ ನೀಡಿ ಸನ್ಮಾನಿಸುವುದು.

11.**2007ರ ಹಿರಿಯ ನಾಗರಿಕರ ಪಾಲಕರ ಪೋಷಣೆ ಹಾಗೂ ರಕ್ಷಣೆ ಕಾಯಿದೆ:**

ಹಿರಿಯ ನಾಗರಿಕರು ತಮ್ಮ ಪೋಷಣೆ, ರಕ್ಷಣೆ ಹಾಗೂ ಇನ್ನಿತರೆ ತೊಂದರೆಗೆ ಒಳಗಾದಂತಹ
ಸಂದರ್ಭದಲ್ಲಿ ಸಂಬಂಧಪಟ್ಟ ಉಪ ವಿಭಾಗಾಧಿಕಾರಿಗಳಲ್ಲಿ ದೂರು ದಾಖಲಿಸಿ, ಅಗತ್ಯವಾದ
ನೆರವು ಪಡೆಯುವುದು

ಈ ಮೇಲಿನ ಎಲ್ಲಾ ಅವಕಾಶಗಳ ಬಗ್ಗೆ ಗ್ರಾಮೀಣ ಮಟ್ಟದಲ್ಲಿ ಮಾಹಿತಿ ನೀಡಿ ಫಲಾನುಭವಿಗಳನ್ನು ಗುರುತಿಸಲು, ಗ್ರಾಮ ಸಮಿತಿಗಳು, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು, ಸಮಾಜ ಸೇವಕರು, ಗ್ರಾ.ಪಂ. ಪಿ.ಡಿ.ಓ. ಹಾಗೂ ಕಾರ್ಯದರ್ಶಿಗಳು ಇಲಾಖೆಯೊಂದಿಗೆ ಸಹಕರಿಸುವಂತೆ ಕೋರಿದೆ.

ಸರ್ಕಾರವು ಹಿರಿಯ ನಾಗರಿಕರಿಗೆ ಸಮಗ್ರ ನೀತಿಯನ್ನು ರೂಪಿಸಿ ಹಂತ ಹಂತವಾಗಿ ಜಾರಿಗೊಳಿಸುತ್ತಿದೆ.

ವಿಕಲಚೇತನರಿಗೆ ಅನುಕಂಪ ಬೇಡ
ಮಾನವೀಯತೆ ತೋರಲೇಕೆ ತಡ

ವೃದ್ಧರನ್ನು ಗೌರವಿಸಿದರೆ
ದೇವರನ್ನು ಪೂಜಿಸಿದಂತೆ

ವಿಕಲಚೇತನರನ್ನು ಮನುಷ್ಯರಂತೆ ನೋಡಿ
ಅವರಿಗೂ ಸಮಾನ ಅವಕಾಶ ನೀಡಿ.

ವೃದ್ಧರ ಮಾರ್ಗದರ್ಶನ ಸರ್ವಕಾಲಕ್ಕೂ
ಅರ್ಥಪೂರ್ಣ ಹಾಗೂ ಆದರ್ಶಪ್ರಾಯ.

ಒಂದು ಕ್ಷಣ ಸಾಮಾನ್ಯ ಮನುಷ್ಯರಾದ ನೀವು ನಿಮ್ಮ ಎರಡು ಕಣ್ಣುಗಳು ಹಾಗೂ ಎರಡು ಕಿವಿಗಳನ್ನು ಮುಚ್ಚಿಕೊಂಡು ಕುರುಡುತನ ಹಾಗೂ ಕಿವುಡುತನವನ್ನು ಅನುಭವಿಸಿ ವಿಕಲಚೇತನರ ಬಗ್ಗೆ ಮಾನವೀಯತೆ ಹೊರಹೊಮ್ಮಬಹುದು, ವಿಕಲಚೇತನರೂ ಮನುಷ್ಯರೆ ಎಂಬ ಭಾವನೆ ನಿಮ್ಮಲ್ಲಿ ಮೂಡಬಹುದು.

ಮರಣಾನಂತರದ ಒಬ್ಬರ ಕಣ್ಣುಗಳು ಇಬ್ಬರು ಅಂಧರ ಬಾಳಿನಲ್ಲಿ ಬೆಳಕು ತರಬಲ್ಲದು. "ಕಣ್ಣುಗಳನ್ನು ದಾನ ಮಾಡಿ ಅಂಧರ ಬಾಳಿಗೆ ಬೆಳಕು ನೀಡಿ"

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ;**

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು
ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಇಲಾಖೆ
ಮಕ್ಕಳ ಅಭಿವೃದ್ಧಿ ಇಲಾಖೆ, ಕೆ.ಆರ್.ಪುರಂ,
9ನೇ ಕ್ರಾಸ್, ಹಾಸನ-573201
ದೂ.ಸಂ:08172-264546

ಉಪನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ಕೆ.ಆರ್.ಪುರಂ,9ನೇ ಕ್ರಾಸ್,
ಹಾಸನ-573201

**ತಾಲ್ಲೂಕು ಮಟ್ಟದಲ್ಲಿ ಈ ಕೆಳಕಂಡವರನ್ನು ಸಂಪರ್ಕಿಸುವುದು**

1.ಎನ್.ಆರ್.ಪ್ರಸನ್ನ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು (M.R.W) ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ ಹಾಸನ ದೂರವಾಣಿ ಸಂಖ್ಯೆ: 9964536271

2.ಬಿ.ವಿ.ಹರೀಶ್ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು(M.R.W) ತಾಲ್ಲೂಕು ಪಂಚಾಯತ್, ಬೇಲೂರು ತಾಲ್ಲೂಕು ದೂ: 8861899350

3.ಕೆ.ಬಿ.ಹರೀಶ್ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು(M.R.W) ತಾಲ್ಲೂಕು ಪಂಚಾಯತ್, ಹೊಳೆನರಸೀಪುರ ತಾಲ್ಲೂಕು ದೂ: 9141602733

4.ಜಾಕೀರ್ ಹುಸೇನ್ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು (M.R.W) ತಾಲ್ಲೂಕು ಪಂಚಾಯತ್, ಆಲೂರು ತಾಲ್ಲೂಕು ದೂ: 9844572560

5.ಕೆ.ಎ. ಚಂದ್ರಶೇಖರ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು(M.R.W) ತಾಲ್ಲೂಕು ಪಂಚಾಯತ್, ಅರಕಲಗೂಡು ತಾಲ್ಲೂಕು ದೂ: 9902757869

6.ಸುಬ್ರಮಣ್ಯ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು(M.R.W) ತಾಲ್ಲೂಕು ಪಂಚಾಯತ್, ಚನ್ನರಾಯಪಟ್ಟಣ ತಾಲ್ಲೂಕು ದೂ: 9731401621

7.ಬಿ.ಡಿ. ಗೀತಾ, ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು(M.R.W) ತಾಲ್ಲೂಕು ಪಂಚಾಯತ್, ಸಕಲೇಶಪುರ ತಾಲ್ಲೂಕು ದೂ: 8762027594

8.ಮಹಮದ್ ಜುಬೇರ್, ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರು (M.R.W) ತಾಲ್ಲೂಕು ಪಂಚಾಯತ್, ಸಕಲೇಶಪುರ ತಾಲ್ಲೂಕು ದೂರವಾಣಿ ಸಂಖ್ಯೆ 9902649777